# ಪೊಲೀಸ್ ಆಯುಕ್ತರ ಕಛೇರಿ, ಎ.ಬಿ ಶೆಟ್ಟಿ ವೃತ್ತದ ಬಳಿ, ಮಂಗಳೂರು ನಗರ,

# ಮಂಗಳೂರು-1.

## ದೂ. ಸಂ: 0824-2220803, ಈ-ಮೇಲ್: magmgc@ksp.gov.in.

## ಪೊಲೀಸು ಆಯುಕ್ತರು, ಮಂಗಳೂರು ನಗರ, ಮಂಗಳೂರು ರವರ ನಡವಳಿಗಳು

ವಿಷಯ: ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ದಿನಾಂಕ: 12-03-2022 ರಿಂದ ದಿನಾಂಕ: 16-03-2022 ರವರೆಗೆ ನಡೆಯುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿಯ ಸ್ಪರ್ಧಾತ್ಮಕ ಪರೀಕ್ಷೆಯ ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ 200 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸುವ ಬಗ್ಗೆ.

ಉಲ್ಲೇಖ:
1. ಕಾರ್ಯ ನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು ಇವರ ಪತ್ರ ಸಂಖ್ಯೆ ಇಡಿ/ಕೆಇಎ/ಆಡಳಿತ/ಸಿ.ಆರ್.19/2020-21 ದಿನಾಂಕ: 02-03-2022.
2. ಜಿಲ್ಲಾಧಿಕಾರಿಗಳು, ದ.ಕ ಜಿಲ್ಲೆ, ಮಂಗಳೂರು ರವರ ಪತ್ರ ಸಂಖ್ಯೆ ಎಂಎಜಿ(2)ಸಿಆರ್/111/2022/175434/ಸಿ4 ದಿನಾಂಕ : 09-03-2022.

*****

**ಪ್ರಸ್ತಾವನೆ:**

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ದಿನಾಂಕ: 12-03-2022 ರಿಂದ ದಿನಾಂಕ: 16-03-2022 ರವರೆಗೆ ಮಂಗಳೂರು ನಗರ ಪೊಲೀಸ್ ಕಮೀಷನರೇಟ್ ಘಟಕದ ವ್ಯಾಪ್ತಿಯ ಪರೀಕ್ಷಾ ಕೇಂದ್ರಗಳಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿಯ ಸ್ಪರ್ಧಾತ್ಮಕ ಪರೀಕ್ಷೆಯು ನಡೆಯಲಿರುತ್ತದೆ. ಈ ಪರೀಕ್ಷೆ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆ ಮತ್ತು ಅನುಮಾನಗಳಿಗೆ ಅಸ್ಪದವಿಲ್ಲದೆ ಸುಲಲಿತವಾಗಿ ನಡೆಸಲು ಸಂಬಂಧಿತ ಪರೀಕ್ಷಾ ಕೇಂದ್ರಗಳ ಸುತ್ತ ಮುತ್ತಲಿನ 200 ಮೀಟರ್ ವ್ಯಾಪ್ತಿಯ ಪ್ರದೇಶದಲ್ಲಿ ಕಲಂ: 144 ಸಿ.ಆರ್.ಪಿ.ಸಿ ಯಂತೆ ನಿಷೇದಾಜ್ಞೆ ಜ್ಯಾರಿಗೊಳಿಸುವಂತೆ ಜಿಲ್ಲಾಧಿಕಾರಿಯವರು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ರವರು ಉಲ್ಲೇಖ (2) ರಲ್ಲಿ ಕೋರಿರುತ್ತಾರೆ.

ಜಿಲ್ಲಾಧಿಕಾರಿಯವರ ಕೋರಿಕೆಯನ್ನು ಪರಿಶೀಲಿಸಲಾಗಿದ್ದು, ಪರೀಕ್ಷೆಯು ಸುಗಮ ಹಾಗೂ ಸುಸುತ್ರವಾಗಿ ನಡೆಸಲು, ನಾಗರಿಕರ ಓಡಾಟವನ್ನು ತಾತ್ಕಾಲಿವಾಗಿ ತಡೆ ಹಿಡಿಯುವುದು ಸೂಕ್ತವಾಗಿರುವುದರಿಂದ ಮಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯಲ್ಲಿ ದಿನಾಂಕ: 12-03-2022 ರಿಂದ ದಿನಾಂಕ: 16-03-2022 ರವರೆಗೆ ನಡೆಯಲಿರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿಯ ಸ್ಪರ್ಧಾತ್ಮಕ ಪರೀಕ್ಷೆಯ ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ 200 ಮೀಟರ್ ವ್ಯಾಪ್ತಿಯ ಪ್ರದೇಶದಲ್ಲಿ ನಿಷೇಧಾಜ್ಞೆ ಜ್ಯಾರಿಗೊಳಿಸುವುದು ಆಗತ್ಯವೆಂದು ತಿರ್ಮಾನಿಸಿ ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

**ಆದೇಶ ಸಂಖ್ಯೆ: 05/ಎಂ.ಎ.ಜಿ 01 /ಎಂ.ಜಿ.ಸಿ/2022, ದಿನಾಂಕ: 09-03-2022.**

ಶ್ರೀ ಎನ್. ಶಶಿಕುಮಾರ್, ಐ.ಪಿ.ಎಸ್, ಪೊಲೀಸ್ ಆಯುಕ್ತರು ಹಾಗೂ ಹೆಚ್ಚುವರಿ ಜಿಲ್ಲಾ ದಂಡಾಧಿಕಾರಿ, ಮಂಗಳೂರು ನಗರ ಆದ ನಾನು ಕಲಂ: 144 ಸಿ.ಆರ್.ಪಿ.ಸಿ ಕಾಯ್ದೆಯನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮಂಗಳೂರು ನಗರದಲ್ಲಿ ದಿನಾಂಕ: 12-03-2022 ರಿಂದ ದಿನಾಂಕ: 16-03-2022 ರವರೆಗೆ ನಡೆಯಲಿರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿಯ ಸ್ಪರ್ಧಾತ್ಮಕ ಪರೀಕ್ಷೆಯ ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ 200 ಮೀಟರ್ ವ್ಯಾಪ್ತಿಯ ಪ್ರದೇಶದಲ್ಲಿ ನಿಷೇಧಾಜ್ಞೆ ಜ್ಯಾರಿಗೊಳಿಸುವುದು ಆಗತ್ಯವೆಂದು ಪರಿಗಣಿಸಿ, ಈ ಕೆಳಕಂಡ ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ 200 ಮೀಟರ್ ವ್ಯಾಪ್ತಿಯನ್ನು ದಿನಾಂಕ: 12-03-2022 ರಿಂದ ದಿನಾಂಕ: 16-03-2022 ರವರೆಗೆ ನಿಷೇಧಿತ ಪ್ರದೇಶವೆಂದು ಘೋಷಿಸಿ ನಿಷೇಧಾಜ್ಞೆಯನ್ನು ಈ ಮೂಲಕ ಘೋಷಿಸಿರುತ್ತೇನೆ.

| | |
|---|---|
| 1 | ST ALOYSIUS PU COLLEGE, KODIALBAIL-POST, MANGALORE. |
| 2 | BESANT NATIONAL PU COLLEGE, KODIALBAIL, MANGALORE. |
| 3 | GOVT PU COLLEGE FOR WOMEN, BALMATTA, MANGALORE |
| 4 | CANARA PU COLLEGE, KODIALBAIL, M G ROAD, MANGALORE. |
| 5 | GOVT PU COLLEGE, CAR STREET, MANGALORE. |

<u>ಈ ಅವಧಿಯಲ್ಲಿ</u> :

1 ನಿಷೇಧಿತ ಪ್ರದೇಶದಲ್ಲಿ ಪರೀಕ್ಷೆಗೆ ಸಂಬಂಧಿಸಿದ ಅಭ್ಯರ್ಥಿಗಳನ್ನು ಹೊರತುಪಡಿಸಿ ಸಾರ್ವಜನಿಕರು 5 ಜನರು ಯಾ ಅದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಗುಂಪು ಸೇರುವುದು ಯಾ ತಿರುಗಾಡುವುದನ್ನು ನಿಷೇಧಿಸಲಾಗಿದೆ.

2 ನಿಷೇಧಿತ ವಲಯದಲ್ಲಿ ಯಾವುದೇ ರೀತಿಯಲ್ಲಿ ಪರೀಕ್ಷೆಯಲ್ಲಿ ನಕಲು ಮಾಡಲು ಸಹಾಯ ಮಾಡುವುದು, ಚೀಟಿ ಅಥವಾ ಇನ್ನಿತರ ರೀತಿಯಲ್ಲಿ ಉತ್ತರಗಳನ್ನು ಬರೆದು, ಯಾ ಇನ್ನಾವುದೇ ವಸ್ತುಗಳನ್ನು ಹಂಚುವುದು. ರವಾನಿಸುವುದು ಇತ್ಯಾದಿ ಚಟುವಟಿಕೆಗಳನ್ನು ಸಂಪೂರ್ಣ ನಿಷೇಧಿಸಿದೆ.

3 ನಿಷೇಧಿತ ವಲಯದಲ್ಲಿ ಯಾವುದೇ ರೀತಿಯ ಕ್ಷಾರಕ (ಆಸಿಡ್) ಯಾ ಸ್ಪೋಟಕ ವಸ್ತುಗಳನ್ನು ಕೊಂಡು ಹೋಗುವುದನ್ನು ಹಾಗೂ ಇನ್ನಿತರ ಮಾರಕ ಆಯುಧಗಳನ್ನು ಹೊಂದುವುದನ್ನು ನಿಷೇಧಿಸಲಾಗಿದೆ.

4 ನಿಷೇಧಿತ ವಲಯದಲ್ಲಿ ಪರೀಕ್ಷೆಗೆ ಸಂಬಂಧಿಸಿದ ಯಾವುದೇ ವಿಷಯಗಳನ್ನು ತಿಳಿಸುವ ಸಲುವಾಗಿ ಸಂಜ್ಞೆಗಳನ್ನು ಮಾಡುವುದು ಹಾಗೂ ಇನ್ನಿತರ ಕ್ರಿಯೆಗಳಲ್ಲಿ ತೊಡಗುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

5 ಪರೀಕ್ಷೆ ಪ್ರಾರಂಭವಾಗುವ ಅರ್ಧ ಗಂಟೆ ಮುಂಚಿತವಾಗಿ ಹಾಗೂ ಪರೀಕ್ಷಾ ಅವಧಿಯವರೆಗೆ ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ಪ್ರದೇಶದಲ್ಲಿ ಜೆರಾಕ್ಸ್ ಅಂಗಡಿಗಳು ಕಾರ್ಯ ನಿರ್ವಹಿಸುವುದನ್ನು ನಿಷೇದಿಸಿದೆ.

6 ನಿಷೇಧಿತ ವಲಯದಲ್ಲಿ ಮೊಬೈಲ್ ದೂರವಾಣಿ ಹಾಗೂ ಪೇಜರ್ ಇತ್ಯಾದಿ ಇಲೆಕ್ಟ್ರಾನಿಕ್ಸ್ ಸಂಪರ್ಕ

ಉಪಕರಣಗಳ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

7. ಈ ನಿಷೇಧಾಜ್ಞೆಯು ಮಂಗಳೂರು ನಗರದಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ದಿನಾಂಕ: 12-03-2022 ರಿಂದ ದಿನಾಂಕ: 16-03-2022 ರವರೆಗೆ ಮಂಗಳೂರು ನಗರ ಪೊಲೀಸ್ ಕಮೀಷನರೇಟ್ ಘಟಕದ ವ್ಯಾಪ್ತಿಯ ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿಯ ಸ್ಪರ್ಧಾತ್ಮಕ ಪರೀಕ್ಷೆಯ ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಮಾತ್ರ ಜ್ಯಾರಿಯಲ್ಲಿರುತ್ತದೆ.
8. ಈ ನಿಷೇಧಾಜ್ಞೆಯು ಜ್ಯಾರಿಯಲ್ಲಿರುವ ಪ್ರದೇಶದಲ್ಲಿ ಸರ್ಕಾರದಿಂದ ಯಾ ಸರ್ಕಾರದ ಆದೇಶದಂತೆ ನಡೆಸಲ್ಪಡುವ ಯಾವುದೇ ಕಾರ್ಯಕ್ರಮ, ಸಭೆ ಸಮಾರಂಭಗಳಿಗೆ ಅನ್ವಯವಾಗುವುದಿಲ್ಲ.

ಈ ನಿಷೇಧಾಜ್ಞೆಯನ್ನು ದಿನಾಂಕ:09-03-2022 ರಂದು ನನ್ನ ಸ್ವ ಹಸ್ತ ಸಹಿ ಹಾಗೂ ಮುದ್ರೆಯೊಂದಿಗೆ ಹೊರಡಿಸಿರುತ್ತೇನೆ.

COMMISSIONER OF POLICE & ADDL. DISTRICT MAGISTRATE, MANGALURU CITY, MANGALURU

(ಎನ್. ಶಶಿ ಕುಮಾರ್, ಐ.ಪಿ.ಎಸ್.)
ಪೊಲೀಸು ಆಯುಕ್ತರು,
ಮಂಗಳೂರು ನಗರ

ಇವರಿಗೆ:

1. ಜಿಲ್ಲಾಧಿಕಾರಿಯವರು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ರವರಿಗೆ ಮಾಹಿತಿಗಾಗಿ.
2. ಉಪ ಪೊಲೀಸು ಆಯುಕ್ತರು, (ಕಾ ಮತ್ತು ಸು), ಮಂಗಳೂರು ನಗರ.
3. ಉಪ ಪೊಲೀಸು ಆಯುಕ್ತರು, (ಅಪರಾಧ ಮತ್ತು ಸಂಚಾರ), ಮಂಗಳೂರು ನಗರ.
4. ಸಹಾಯಕ ಪೊಲೀಸು ಆಯುಕ್ತರು, ಮಂಗಳೂರು ಕೇಂದ್ರ, ದಕ್ಷಿಣ ಮತ್ತು ಉತ್ತರ ಉಪ ವಿಭಾಗ ಇವರಿಗೆ- ತಮ್ಮ ವ್ಯಾಪ್ತಿಯಲ್ಲಿ ಈ ಆದೇಶವನ್ನು ಜ್ಯಾರಿಗೊಳಿಸಿ ಪರೀಕ್ಷಾ ಕೇಂದ್ರಗಳಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಸೂಕ್ತ ಪೊಲೀಸು ಬಂದೋಬಸ್ತು ಒದಗಿಸಲು ಸೂಚಿಸಿದೆ.
5. ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿ, ದ.ಕ ಜಿಲ್ಲೆ ಮಂಗಳೂರು ಇವರಿಗೆ ಈ ಅಧಿಸೂಚನೆಯನ್ನು ಜಿಲ್ಲೆಯ ವಾರ್ತಾ ಮಾಧ್ಯಮಗಳಲ್ಲಿ ವಾರ್ತಾ ರೂಪದಲ್ಲಿ ಉಚಿತವಾಗಿ ಪ್ರಚಾರ ಪಡಿಸಲು ಕೋರಿದೆ.
6. ಸಂಬಂಧಿಸಿದ ಎಲ್ಲಾ ಶಾಲಾ ಕಾಲೇಜುಗಳ ಪ್ರಾಂಶುಪಾಲರಿಗೆ
7. ನಿಲಯ ನಿರ್ದೇಶಕರು, ಆಕಾಶವಾಣಿ, ಮಂಗಳೂರು ಇವರಿಗೆ ಆಕಾಶವಾಣಿ ಮೂಲಕ ಬಿತ್ತರಿಸಲು ಕೋರಿದೆ.
8. ಈ ಕಛೇರಿಯ ಗಣಕಯಂತ್ರ ಶಾಖೆಗೆ ಪೊಲೀಸ್ ಬ್ಲಾಗ್‌ನಲ್ಲಿ ಅಳವಡಿಸಲಯ.
9. ಈ ಕಛೇರಿಯ ಸಿ.ಬಿ ಶಾಖೆ ಮತ್ತು ಸಿ.ಎಸ್.ಬಿ ಶಾಖೆಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.
10. ಪೊಲೀಸ್ ನಿರೀಕ್ಷಕರು, ನಗರ ನಿಯಂತ್ರಣ ಕೊಠಡಿ ರವರಿಗೆ ಸೂಕ್ತ ಕ್ರಮಕ್ಕಾಗಿ.